ಅಳೆದೇವ್ರು, ಏನು ಈ ಕಡೆ ಹಾದಿ ತೆಪ್ಪಿ ಬಂದಿ?" ಎಂದು ಕೇಳಿದಳು.

"ದೊಡ್ಡವಾಡ ಸಾಹುಕಾರು ನಿನ್ನ ಕರಕೊಂಬರಾಕ ಆಳು ಮನುಷ್ಯಾನ್ನ ಕಳಿಸ್ಯಾರು ಅತ್ತಿ."

"ಯಾಕಪಾ ಏನಾಗೇತಿ ಸಾಹುಕಾರಗ?''

"ಅವ್ವಾರ, ನಿಮ್ಮ ಪುಣ್ಣೆದಿಂದ ಸಾಹುಕಾರ ಅರಾಮ ಅದಾರ್ರಿ. ಆದ್ರ ಸಣ್ಣ ಸಾಹುಕಾರ್ತಿ ಗಾಡಿ ಮ್ಯಾಲಿಂದ ಬಿದ್ದು ಸೊಂಟಕ್ಕ ಪೆಟ್ಟು ಮಾಡಿಕೊಂಡಾರ್ರಿ. ಅದಕ್ಕ ನಿಮ್ಮನ್ನು ಕರಕೊಂಡ ಹೋಗಾಕ ಬಂದೇನ್ರಿ. ಎವ್ವಾ, ಮುಂದಿನ ಗಾಡಿಗೆ ಹೋಗೂಣು ತಯಾರಾಗ್ರಿ" ಎಂದ.

"ಅದ್ದೆಂಗಾದೀತಪಾ, ಇವತ್ತು ಕೂರಿ ಬೀರನ ಎರಡು ಆಡು ಮರಿ ಕಾಲ ಮುರಕೊಂಡಾವು. ಈಗರೆ ಕಟ್ಟಿ ಬಂದೇನಿ. ಅವುಕ ಅಗಸುದ್ದೆ ತಯಾರ ಮಾಡಿ, ಗುಳಿಗಿ ಕೊಟ್ಟು ಬರಬೇಕು. ನೀ ಈಗ ಹೋಗು, ನಾ ನಾಳೆ ಹೊತ್ತು ಹೊಂಡುತ್ತಲೆ ಬರತೇನಿ" ಎಂದಳು.

"ಸಾಹುಕಾರ್ತಿಗೆ ಬಾಳ ತ್ರಾಸೈತ್ರಿ..."

"ಮೂಕ ಪ್ರಾಣಿ ಇಲಾಜ ಮಾಡಿ ನಾ ಬರತೇನಿ, ಹೇಳು ನಿಮ್ಮ ಸಾಹುಕಾರ್ಗ."

"ಇವತ್ತೇ ಕರಕೊಂಬಾ ಅಂದಾರ್ರಿ ಎವ್ವಾ."

"ನಮ್ಮತ್ತಿ ಮಾತು ಅಂದ್ರ ಮಾತು, ಹೊತ್ತು ಹೊಂಡುತ್ತಲೆ ಅಲ್ಲಿರತಾಳು. ಇಕಿ ಕೈ ಮುಟ್ಟದ್ರ ಸಾಕು ಸಾಹುಕಾರ್ತಿ ಚಕ್ಕನೆ ಎದ್ದು ಕುಂಡರತಾಳು. ಅಂಥ ಕೈಗುಣ ನಮ್ಮತ್ತೀದು. ನೀ ಅದರ ಚಿಂತಿ ಬಿಡು, ಬರತಾಳು" ಎಂದ ನಿಂಗ್ರಾಜ.

"ತೆಪ್ಪಿಸಬ್ಯಾಡ್ರಿ ಎವ್ವಾ, ನಾ ನಡಿತೇನ್ರಿ" ಎಂದು ನಮಸ್ಕರಿಸಿ ಹೋದ.

"ಏನತ್ತಿ ಮನ್ಯಾಗ ಯಾರೂ ಕಾಣವಲ್ಲರು, ಎಲ್ಲಿ ಹೋಗ್ಯಾರು?'' ಎಂದು ಕೇಳಿದ.

"ಹತ್ತಿ ಬಿಡಸಾಕ ಹೋಗ್ಯಾರು" ಎಂದಳು ಅತ್ತಿ. ತುದಿಕಟ್ಟೆಗೆ ಕುಳಿತ ನಿಂಗರಾಜು ಎಲೆಡಕಿ ಚಿಂಚಿ ತೆಗೆದ...

"ನಿಂಗ್ರಾಜ ಗಣಪತಿ ಮಾಡದಾಗ ತಪ್ಪಲ ಐತಿ, ಅದನ್ನು ಚೂರು ಅರೆದು ಕೋಡಪಾ. ಆಕಿಗೂ ನಾಲ್ಕು ದಿನದ ಗುಳಿಗಿ ಮಾಡೂಣು" ಎಂದಳು.

''ಆಯ್ತು ಅತ್ತಿ" ಎಂದು ಮಾಡದಲ್ಲಿಟ್ಟಿದ್ದ ತಪ್ಪಲು ತೆಗೆದುಕೊಂಡು ಸಣ್ಣಗೆ ಕತ್ತರಿಸಿ ಕಲ್ಲು ಮೇಲೆ ಹಾಕಿ ಕುಟ್ಟಿ ಅರೆಯತೊಡಗಿದ.

"ಸಾವಕಾಶ ತಮ್ಮಾ, ರಸ ಸೋರಿ ಹೊರಗ ಬೀಳಬಾರದು ಅದರಾಗs ಅಟ್ಟಸಬೇಕು."

ರಸ ಹೊರಗೆ ಬೀಳದಂತೆ ಅರೆದು ತೋರಿಸಿದ. ಬೆರಳಾಡಿಸಿ, ''ಮಸ್ತ, ನನಕ್ಕಿಂತ ಚಂದ ಅರದೀದಿ." ಪಿಂಗಾಣಿ ಬೋಗುಣಿ ಮುಂದೆ ಸರಿಸಿ ಅದರಲ್ಲಿ ತುಂಬಲು ಹೇಳಿದಳು. ಕೈನಿಂದ ಸಾವಕಾಶ ತುಂಬುತ್ತ, "ಅತ್ತಿ, ಇಷ್ಟ ಅಳ್ಳಕ ಐತಿ, ಇದರಲೆ ಗುಳಿಗಿ ಹೆಂಗ ಕಟ್ಟತಿ? ಮತ್ತೇನರೆ ಕೂಡಸತಿ ಏನ ಇದಕ?" ಎಂದು ಕೇಳಿದ.

"ಇನ್ನೊಂದು ಗಳಿಗೊತ್ತು ಬಿಟ್ಟು ನೋಡು, ಎಲ್ಲ ಅಟ್ಟಿಸಿ ಬೆಲ್ಲದ ಆಣ ಆದ್ವಾಂಗ ಆಗತೈತಿ. ಆಗ ಉಂಡಿ ಕಟ್ಟೋದು. ವನಸ್ಪತಿಯೊಳಗ ದೊಡ್ಡ ಸಗತಿ ಐತಿ ತಮ್ಮಾ, ಆಡಿನ ಹಾಲಿನ ಜೊತೆ ದಿನಕ್ಕ ಒಂದು ಗುಳಿಗಿ ನುಂಗಿದ್ರ ಸಾಕು, ಮುರಿದ ಎಲುವು ಬೆಸಗೊಳ್ಳತೈತಿ, ಎಂಥ ನೋವಿದ್ದರೂ ಮಂಗಮಾಯಿ ಆಗತೈತಿ" ಎಂದು ನಕ್ಕಳು.

"ಅತ್ತಿ, ಇದನ್ನೆಲ್ಲಾ ನೀ ಎಲ್ಲಿ, ಹೆಂಗ ಕಲ್ತಿ?"

"ಹೊರಗಿನ ಮಠದಾಗ ಇದ್ದನಲ್ಲಪಾ ಪಡದಪ್ಪ ಅಂವ ಕಲಿಸಿದ ಇದ್ಯಾ ಇದು. ಅವ ಹೇಳಿಕೊಟ್ಟ ನಾ ಹಾಂಗ ಮಾಡಕೊಂತ ನಡದ್ದೇನಿ. ಒಟ್ಟು ನಾಲ್ಕು ಜನರಿಗೆ ಉಪಯೋಗಾದ್ರ ಸಾಕು."

"ಫೀನೂ ಚೊಲೊ ಬರತಿರಬೇಕಲ್ಲ!" ಜೋಕು ಮಾಡಿದ.